**ದಿನಾಂಕಃ 18.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ – ಶ್ರೀ ವಿ.ಎಂ.ಎನ್ ವಕೀಲರಿಂದ ವಾದಿ ಪರವಾಗಿ**

ನೌಕರಿ ಇದ್ದವರಿಗೆ ಪಾಲು ಕೊಡಬಾರದು ಎಂದು ಯಾವುದೇ ನಿಯಮ ಇಲ್ಲ ಎಂದರೆ ಸರಿ. ವಾದಿಗೆ ದಾವಾ ಸ್ವತ್ತಿನಲ್ಲಿ ಪಾಲು ಕೊಡಬಾರದು ಎಂದು ನನ್ನ ತಂದೆ ಮತ್ತು ದೊಡ್ಡಪ್ಪ ಸುಳ್ಳು ತಕರಾರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನಾದ 1 ನೇ ಪ್ರತಿವಾದಿ ಆಸ್ತಿಗಳ ಮತ್ತು ವಾಟ್ನಿ ವಿಷಯದ ಬಗ್ಗೆ ನನಗಿಂತ ಅವರಿಗೆ ಹೆಚ್ಚಿನ ಮಾಹಿತಿ ಇದೆ ಎಂದರೆ ಸರಿ.ಆಸ್ತಿಗಳ ಮತ್ತು ವಾಟ್ನಿ ವಿಷಯದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಸ್ವತಃ ನುಡಿಯುವುದೇನೆಂದರೆ ನನ್ನ ತಂದೆ ಹೇಳಿರುವದರಿಂದ ನನಗೆ ಗೊತ್ತು. ನನ್ನ ತಂದೆ ಸದರಿ ವಿಷಯನ್ನು ನಾನು ವಯಸ್ಕನಾದಾಗ ಹೇಳಿರುತ್ತಾರೆ. ನನ್ನ ಅಣ್ಣನಾದ ಪ್ರತಿವಾದಿ ನಂ. 2(ಬ) ರವರು ನನಗಿಂತಲೂ 10 ವರ್ಷ ದೊಡ್ಡವರು. ನನಗಿಂಗಲೂ ನನ್ನ ಅಣ್ಣನಾದ ಪ್ರತಿವಾದಿ ನಂ. 2(ಬ) ರವರಿಗೆ ಆಸ್ತಿ ಮತ್ತು ವಾಟ್ನಿ ವಿಚಾರವಾಗಿ ಹೆಚ್ಚಿನ ಮಾಹಿತಿ ಇದೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಪಾಲು ಕೊಡಬಾರದು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವೆ ಸಲ್ಲಿಸುವ ಮೊದಲು ಊರಿಗೆ ಬಂದಾಗ ದಾವಾ ಆಸ್ತಿಯಲ್ಲಿ ಬೆಳೆದ ಕಾಳು ಕಡಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿರುವ ಆಸ್ತಿಗಳನ್ನು ವಾದಿಗೆ ಕೊಡಬಾರದೆಂಬ ದುರುದ್ದೇಶದಿಂದ ವರ್ಗಾವಣೆ ಮಾಡಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ